ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

15

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 18/2/21

ಬಾಲಾಪರಾಧ ಕಾಯ್ದೆ ತಿದ್ದುಪಡಿ

ಸಂಪುಟ ಅನುಮೋದನೆ : ಜಿಲ್ಲಾಧಿಕಾರಿಗೆ ಹೆಚ್ಚಿನ ಹೊಣೆ

ನವದೆಹಲಿ: ಜುವೆನೈಲ್ ಜಸ್ಟೀಸ್ (ಕೇರ್ ಆ್ಯಂಡ್ ಪ್ರೊಟೆಕ್ಷನ್ ಆಫ್ ಚಿಲ್ಡ್ರನ್) ಆ್ಯಕ್ಟ್ 2015ರ ತಿದ್ದುಪಡಿ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ. ಇದರಂತೆ, ಬಾಲಾಪರಾಧ ನ್ಯಾಯಕ್ಕೆ ಸಂಬಂಧಿಸಿ ಜಿಲ್ಲಾಧಿಕಾರಿ ಮತ್ತು ಹೆಚ್ಚುವರಿ ಜಿಲ್ಲಾಧಿಕಾರಿಗಳ ಹೊಣೆಗಾರಿಕೆ ಹೆಚ್ಚಾಗಲಿದೆ ಎಂದು ಸಂಪುಟ ಸಭೆಯ ನಿರ್ಧಾರವನ್ನು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಬುಧವಾರ ಹೇಳಿದರು.



ಬಾಲಾಪರಾಧ ನ್ಯಾಯ ಕಾನೂನು ಅನುಷ್ಠಾನಕ್ಕೆ ಸಂಬಂಧಿಸಿದ ಸಂಸ್ಥೆಗಳ ಕೆಲಸ, ಕಾರ್ಯಗಳ ಮೇಲೆ ನಿಗಾವಹಿಸುವ ಜವಾಬ್ದಾರಿ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ ಮತ್ತು ಹೆಚ್ಚುವರಿ ಜಿಲ್ಲಾಧಿಕಾರಿಗಳ ಹೆಗಲೇರಲಿದೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕವೂ ಜಿಲ್ಲಾಧಿಕಾರಿಗಳ ಅಧೀನದ ಕೆಲಸ ಮಾಡಲಿದೆ.

ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯುಸಿ)ಗಳ ಸದಸ್ಯರಾಗುವವರ ಹಿನ್ನೆಲೆ ಪರಿಶೀಲನೆಗೆ ಇದುವರೆಗೆ ಯಾವುದೇ ನಿಶ್ಚಿತ ನಿರ್ದೇಶನ ಇರಲಿಲ್ಲ. ಕಾನೂನು ತಿದ್ದುಪಡಿ ಬಳಿಕ ಅದೂ ಇರಲಿದೆ. ಸಿಡಬ್ಲ್ಯುಸಿ ಸದಸ್ಯರಾಗಬೇಕಾದರೆ ಅದಕ್ಕೆ ಬೇಕಾದ ಹಿನ್ನೆಲೆ, ಶೈಕ್ಷಣಿಕ ಅರ್ಹತೆಯೂ ಕಾನೂನಿನಲ್ಲಿ ಸೇರ್ಪಡೆಗೊಳ್ಳಲಿದೆ. ಯಾವುದೇ ಸಂಘಟನೆ ಮಕ್ಕಳ ಕಾಳಜಿ ಸಂಸ್ಥೆ (ಚೈಲ್ಡ್ ಕೇರ್ ಇನ್‌ಸ್ಟಿಟ್ಯೂಷನ್) ನಡೆಸಬೇಕಾದರೆ ಅದರ ಉದ್ದೇಶವನ್ನು ರಾಜ್ಯ ಸರ್ಕಾರಕ್ಕೆ ತಿಳಿಸಬೇಕೆಂಬ ನಿಯಮ ಜಾರಿಯಲ್ಲಿದೆ. ಪ್ರಸ್ತಾವಿತ ತಿದ್ದುಪಡಿಯಲ್ಲಿ ಇಂತಹ ಸಂಸ್ಥೆಗಳ ನೋಂದಣಿಗೆ ಮೊದಲು ಜಿಲ್ಲಾಧಿಕಾರಿ ಅದರ ಸಾಮರ್ಥ್ಯ ಮತ್ತು ಹಿನ್ನೆಲೆ ಪರಿಶೀಲಿಸಿ ನಂತರ ರಾಜ್ಯ ಸರ್ಕಾರಕ್ಕೆ ಶಿಫಾರಸು ಕಳುಹಿಸುವ ಅಂಶ ಸೇರ್ಪಡೆಯಾಗಲಿದೆ.

ಸಿಡಬ್ಲ್ಯುಸಿ, ಜುವೆನೈಲ್ ಪೊಲೀಸ್ ಘಟಕ, ನೋಂದಾಯಿತ ಸಂಸ್ಥೆಗಳ ಮೌಲ್ಯಮಾಪನವನ್ನು ಜಿಲ್ಲಾಧಿಕಾರಿ ಸ್ವತಂತ್ರವಾಗಿ ಮಾಡಬಹುದಾಗಿದೆ. ಜುವೆನೈಲ್ ಜಸ್ಟೀಸ್ ಆ್ಯಕ್ಟ್‌ನ ಅವಕಾಶವನ್ನು ಇನ್ನಷ್ಟು ವಿಸ್ತರಿಸಲಾಗುತ್ತಿದೆ ಎಂದು ಸಚಿವರು ವಿವರಿಸಿದರು.

ಕಾಳಜಿ ಬೇಕಾದ ಮಗುವಿನ ವ್ಯಾಖ್ಯಾನ ಪರಿಷ್ಕರಣೆ

ಪ್ರಸ್ತಾವಿತ ತಿದ್ದುಪಡಿಯಲ್ಲಿ 'ಕಾಳಜಿ ಬೇಕಾದ ಮಗು' (ಚೈಲ್ಡ್ ಇನ್ ನೀಡ್ ಆಫ್ ಕೇರ್) ಎಂಬುದರ ವ್ಯಾಖ್ಯಾನವನ್ನು ಪರಿಷ್ಕರಿಸಲಾಗುತ್ತಿದೆ. ಇದರಲ್ಲಿ, ಮಾನವ ಕಳ್ಳಸಾಗಣೆ, ಮಾದಕ ದ್ರವ್ಯ, ಶೋಷಣೆ ಮತ್ತು ಪಾಲಕರಿಂದ ಪರಿತ್ಯಕ್ತರಾದ ಸಂತ್ರಸ್ತ ಮಕ್ಕಳನ್ನೂ ಈ ವ್ಯಾಖ್ಯಾನದ ಮತ್ತು ರಕ್ಷಣೆಯ ವ್ಯಾಪ್ತಿಗೆ ಸೇರಿಸಲಾಗುತ್ತಿದೆ ಎಂದು ಸಚಿವೆ ಸ್ಮೃತಿ ಇರಾನಿ ಹೇಳಿದರು.



ಸಂಪುಟ ಸಭೆಯ ನಂತರ ಮಾಹಿತಿ ನೀಡಿದ ಸಚಿವರಾದ ಸ್ಮೃತಿ ಇರಾನಿ ಮತ್ತು ರವಿಶಂಕರ್ ಪ್ರಸಾದ್.

3+1 ಅಪರಾಧ ವಿಭಾಗ

ಪ್ರಸ್ತುತ ಈ ಕಾನೂನು ವ್ಯಾಪ್ತಿಯಲ್ಲಿ ಮೂರು ಅಪರಾಧ ವಿಭಾಗಗಳಿವೆ. [illegible] ಸಣ್ಣ, ಗಂಭೀರ, ಹೀನ ಅಪರಾಧ ವಿಭಾಗಗಳು. ಪ್ರಸ್ತಾವಿತ ಕಾನೂನು ತಿದ್ದುಪಡಿ ಮೂಲಕ ಹೊಸ ವಿಭಾಗವನ್ನು ಸೇರ್ಪಡೆಗೊಳಿಸಲಾಗುತ್ತದೆ. [illegible] ಸ್ಮೃತಿ ಇರಾನಿ ಸ್ಪಷ್ಟಪಡಿಸಿದರು.

ಭಾರತ-ಮಾರಿಷಸ್ ಮುಕ್ತ ವ್ಯಾಪಾರ ಒಪ್ಪಂದ ಪ್ರಸ್ತಾವನೆಗೆ ಅನುಮೋದನೆ

ಭಾರತ ಮತ್ತು ಮಾರಿಷಸ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಇದರಂತೆ, ಮಾರಿಷಸ್‌ನಲ್ಲಿ ಇನ್ನು ಭಾರತದ ಕೃಷಿ, ಜವಳಿ, ಎಲೆಕ್ಟ್ರಾನಿಕ್ಸ್ ಮತ್ತು ಇತರ ಕ್ಷೇತ್ರದ 300ಕ್ಕೂ ಹೆಚ್ಚು ಉತ್ಪನ್ನಗಳು ರಿಯಾಯಿತಿ ದರದಲ್ಲಿ ಲಭ್ಯವಾಗಲಿವೆ. ಸಮಗ್ರ ಆರ್ಥಿಕ ಸಹಕಾರ ಮತ್ತು ಪಾಲುದಾರಿಕೆ ಒಪ್ಪಂದ ಪ್ರಕಾರ ಇದು ನಡೆಯಲಿದೆ. ಇದೇ ರೀತಿ, ಮಾರಿಷಸ್‌ನ ಮೀನು, ವಿಶೇಷ ಸಕ್ಕರೆ, ಬಿಸ್ಕತ್, ತಾಜಾ ಹಣ್ಣು, ಜ್ಯೂಸ್, ಮಿನರಲ್ ವಾಟರ್, ಬಿಯರ್, ಆಲ್ಕೋಹಾಲಿಕ್ ಪಾನೀಯಗಳು, ಸೋಪ್, ಬ್ಯಾಗ್, ಮೆಡಿಕಲ್ ಸರ್ಜಿಕಲ್ ಉಪಕರಣಗಳು, ಉಡುಪುಗಳು ಸೇರಿ 615 ಉತ್ಪನ್ನಗಳು ಭಾರತದ ಮಾರುಕಟ್ಟೆಗಳಲ್ಲಿ ಲಭ್ಯವಾಗಲಿವೆ.

ಟೆಲಿಕಾಂಗೆ ₹12,000 ಕೋಟಿಗೂ ಅಧಿಕ ಮೊತ್ತದ ಪಿಎಲ್‌ಐ ಸ್ಕೀಮ್

ಟೆಲಿಕಾಂ ಕ್ಷೇತ್ರದಲ್ಲಿ ಮುಂದಿನ ಐದು ವರ್ಷದ ಅವಧಿಯಲ್ಲಿ ₹ 2.4 ಲಕ್ಷ ಕೋಟಿ ಮೌಲ್ಯದ ಉತ್ಪಾದನಾ ಏರಿಕೆ ನಿರೀಕ್ಷಿಸುತ್ತಿರುವ ಕೇಂದ್ರ ಸರ್ಕಾರ ₹ 12,195 ಕೋಟಿಯ ಪಿಎಲ್‌ಐ ಯೋಜನೆಯನ್ನು ಘೋಷಿಸಿದೆ. ಇದಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ. ಟೆಲಿಕಾಂ ಉಪಕರಣಗಳ ಆಮದು ಪ್ರಮಾಣವನ್ನು 50,000 ಕೋಟಿ ರೂಪಾಯಿಯಷ್ಟು ಕಡಿಮೆ ಮಾಡಿ, ಮೇಡ್ ಇನ್ ಇಂಡಿಯಾ ಉತ್ಪನ್ನವಾಗಿಸಲು ಈ ನಿರ್ಧಾರ ಕೈಗೊಂಡಿದೆ. ಅಲ್ಲದೆ, ಈ ಉತ್ಪನ್ನಗಳನ್ನು ಪ್ರಾದೇಶಿಕ ಮಾರುಕಟ್ಟೆ ಮತ್ತು ರಫ್ತು ಮಾಡುವುದಕ್ಕೆ ಕೇಂದ್ರ ಸರ್ಕಾರ ಉತ್ತೇಜನ ನೀಡಲಿದೆ. ಈ ಯೋಜನೆ ಮೂಲಕ ₹ 3,000 ಕೋಟಿ ಹೂಡಿಕೆ, [illegible] ನೇರ, ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ.

ರಫ್ತು-ಆಮದು ಲೆಕ್ಕ

- ದ್ವಿಪಕ್ಷೀಯ ವಹಿವಾಟು 690 ದಶಲಕ್ಷ ಡಾಲರ್ (2019-20), 120 ಕೋಟಿ ಡಾಲರ್ (2018-19)
- ಭಾರತದ ರಫ್ತು 662 ದಶಲಕ್ಷ ಡಾಲರ್ (2019-20) ಆಮದು 27.89 ದಶಲಕ್ಷ ಡಾಲರ್
- ಮಾರಿಷಸ್‌ನಿಂದ ಭಾರತಕ್ಕೆ ಬಂದ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) 824 ಕೋಟಿ ಡಾಲರ್ (2019-20)